ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೮**

# ಕರ್ನಾಟಕ ವಿಧಾನ ಪರಿಷತ್ತು

**ನೂರ ನಲವತ್ತನಾಲ್ಕನೆಯ ಅಧಿವೇಶನ**
**ಬುಧವಾರ, ದಿನಾಂಕ: ೨೨ನೇ ಸೆಪ್ಟೆಂಬರ್, ೨೦೨೧**

---

**ಸಮೂಹ – III**

೧. ಲೋಕೋಪಯೋಗಿ ಸಚಿವರು

೨. ಕಂದಾಯ ಸಚಿವರು

೩. ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೪. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

೫. ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು

೬. ಪಶುಸಂಗೋಪನೆ ಸಚಿವರು

---

## ಬ್ರಿಟೀಷ್ ಆಳ್ವಿಕೆ ಅವಧಿಯಲ್ಲಿ ಲೀಜ್ ಆಧಾರದ ಮೇಲೆ ನೀಡಲಾದ ಜಮೀನುಗಳ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೧೧೬ (೧೨೮೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸ್ವಾತಂತ್ರ್ಯ ಮುನ್ನ ಬ್ರಿಟೀಷ್ ಆಳ್ವಿಕೆ ಅವಧಿಯಲ್ಲಿ ಲೀಜ್ ಆಧಾರದ ಮೇಲೆ ನೀಡಲಾಗಿದ್ದ ಜಮೀನಿನ ಅವಧಿ ಮುಗಿದಿರುವ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಆ) ಸದರಿ ಜಮೀನುಗಳು ಇಂದು ನಗರ ಪಟ್ಟಣಗಳ ಮಧ್ಯೆ ಇದ್ದು, ಸರ್ಕಾರಕ್ಕೆ ದೊಡ್ಡ ಮಟ್ಟದ ಆಸ್ತಿಯಾಗಲಿದ್ದು, ಸದರಿ ಆಸ್ತಿಗಳನ್ನು ಕೂಡಲೇ ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರ ಅನುಸರಿಸಬೇಕಾದ ಕ್ರಮಗಳೇನು ;

(ಇ) ಒಂದು ವೇಳೆ ಲೀಜ್ ಮುಂದುವರಿಸುವುದಾದಲ್ಲಿ, ಇಂದಿನ ಮಾರುಕಟ್ಟೆಯ ಮೌಲ್ಯ ನಿರ್ಧರಣೆಯನ್ನು ಬಿ.ಎಮ್.ಆರ್.ಸಿ.ಎಲ್. (ಬೆಂಗಳೂರು ಮೆಟ್ರೋ) ಮಾದರಿಯಲ್ಲಿ ಅನುಸರಿಸುವ ಬಗ್ಗೆ ಸರ್ಕಾರದ ಧೋರಣೆಗಳೇನು ?

## ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಕುರಿತು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೭ (೧೨೫೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳಿವೆ ; ಅವು ಎಲ್ಲೆಲ್ಲಿವೆ ; (ವಿವರ ನೀಡುವುದು)

(ಆ) ಈ ಹೆದ್ದಾರಿಗಳ ರಸ್ತೆ ನಿರ್ಮಾಣ ಮತ್ತು ನಿರ್ವಹಣೆ ಯಾವ ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ ;

(ಇ) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI)ದಿಂದ ಪ್ರಸ್ತುತ ಎಲ್ಲೆಲ್ಲಿ ಯಾವ ಯಾವ ರಾಷ್ಟ್ರೀಯ ಹೆದ್ದಾರಿ ಕೆಲಸ ನಡೆಯುತ್ತಿದೆ ; ಸರ್ಕಾರ ಯಾವಾಗ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ರಸ್ತೆ ನಿರ್ಮಾಣದ ಕಾರ್ಯವನ್ನು ವಹಿಸಲಾಗಿತ್ತು ; ಅದು ಯಾವ ಹಂತದಲ್ಲಿದೆ ?

## ಎತ್ತಿನಹೊಳೆ ನೀರಾವರಿ ಯೋಜನೆಯ ಭೂ ಸಂತ್ರಸ್ಥರ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೮ (೧೧೭೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ಎತ್ತಿನಹೊಳೆ ನೀರಾವರಿ ಯೋಜನೆಗಳಿಗಾಗಿ ಎಷ್ಟು ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ ; (ಜಮೀನು ಕಳೆದುಕೊಂಡಿರುವ ಸಂತ್ರಸ್ಥರ ಹೆಸರು, ಜಮೀನಿನ ಪ್ರಮಾಣ ಮತ್ತು ಊರಿನ ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಯೋಜನೆಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಸರ್ಕಾರದಿಂದ ಪರಿಹಾರ ನೀಡಲು ಕಂದಾಯ ಇಲಾಖೆಯು ಕೈಗೊಂಡಿರುವ ಕ್ರಮಗಳೇನು ; ಕಂದಾಯ ಇಲಾಖೆಯ ವಿಳಂಬ ಧೋರಣೆಗಳಿಂದ ಭೂ ಸಂತ್ರಸ್ಥರಿಗೆ ಆಗುತ್ತಿರುವ ಅನಾನುಕೂಲಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಯೋಜನೆಗಳ ಭೂ ಸಂತ್ರಸ್ಥರಿಗೆ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಮತ್ತು ಎಷ್ಟು ಸಂತ್ರಸ್ಥರಿಗೆ ಪರಿಹಾರ ನೀಡಲಾಗಿದೆ ; ಪರಿಹಾರ ನೀಡಿರುವ ಮೊತ್ತವೆಷ್ಟು ; (ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳೊಂದಿಗೆ ನೀಡುವುದು)

(ಈ) ಈ ಯೋಜನೆಗಳಡಿ ಇದುವರೆಗೂ ಪರಿಹಾರ ಪಡೆಯದ ಭೂ ಸಂತ್ರಸ್ಥರ ಎಷ್ಟು ಜನ ; (ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳನ್ನು ನೀಡುವುದು) ಇವರಿಗೆ ಪರಿಹಾರ ನೀಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು ; ಮತ್ತು ಯಾವ ಕಾಲಮಿತಿಯೊಳಗೆ ಪರಿಹಾರ ನೀಡಲು ಕ್ರಮವಹಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

**ಹಾವೇರಿ, ಗದಗ, ಧಾರವಾಡ ಜಿಲ್ಲೆಗಳಲ್ಲಿ ಮಳೆಯಿಂದ ಹಾನಿಯಾದ ಬಗ್ಗೆ**

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೯ (೧೭೪೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯಾದ್ಯಂತ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಉಂಟಾದ ಬೆಳೆಹಾನಿ, ಮನೆಹಾನಿ, "ಜೀವ ಹಾನಿ" ಹಾಗೂ ಪ್ರಾಣಿ ಜೀವ ಹಾನಿಗಳ ಅಂಕಿ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಜ್ಯಾದ್ಯಂತ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಉಂಟಾದ ಬೆಳೆಹಾನಿ, ಮನೆಹಾನಿ, ಜೀವ ಹಾನಿ ಹಾಗೂ ಪ್ರಾಣಿ ಜೀವ ಹಾನಿಗೊಳಗಾದ ಸಂತ್ರಸ್ಥರಿಗೆ ಸರ್ಕಾರದಿಂದ ಪರಿಹಾರಧನವನ್ನು ಒದಗಿಸಲಾಗಿದೆಯೇ ; (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

(ಇ) ಸಂತ್ರಸ್ತರಿಗೆ ಪರಿಹಾರಧನ ಒದಗಿಸಲು ವಿಳಂಬವಾಗಿದ್ದಲ್ಲಿ, ಅದಕ್ಕೆ ಕಾರಣವೇನು ; ಹಾಗೂ ಪರಿಹಾರಧನ ಒದಗಿಸಲು ಬೇಕಾಗುವ ಕಾಲಮಿತಿ ಎಷ್ಟು ?

## ಬಾಗಲಕೋಟೆ–ಬೆಳಗಾವಿ ಜಿಲ್ಲೆಯ ಪಂಚಾಯಿತಿಗಳ ವಸತಿ ಯೋಜನೆ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೧೧೦ (೧೭೭೯) ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಾಗಲಕೋಟೆ–ಬೆಳಗಾವಿ ಜಿಲ್ಲೆಗಳಲ್ಲಿ ಪಂಚಾಯಿತಿ ವತಿಯಿಂದ ವಾಜಪೇಯಿ ವಸತಿ ಯೋಜನೆಯಡಿ ಬಡವರಿಗಾಗಿ ಮನೆ ವಿತರಿಸಲು ಎಷ್ಟು ಎಕರೆ ಭೂಮಿ ಖರೀದಿಸಲಾಗಿದೆ ; ಹಾಗೂ ಯಾವಾಗ ಖರೀದಿಸಲಾಗಿದೆ ;

(ಆ) ಈ ವಸತಿ ಯೋಜನೆಗಾಗಿ ಸರ್ಕಾರದಿಂದ ಎಷ್ಟು ಹಣ ನಿಗದಿಪಡಿಸಲಾಗಿದೆ ;

(ಇ) ಈ ಯೋಜನೆಯಡಿ ಸದ್ಯ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಮತ್ತು ಇನ್ನೂ ಎಷ್ಟು ಮನೆಗಳನ್ನು ನಿರ್ಮಿಸುವ ಯೋಜನೆ ಇದೆ ;

(ಈ) ಇಲ್ಲಿಯವರೆಗೆ ಈ ಯೋಜನೆಗೆ ಜಾಗ ಮತ್ತು ಮನೆ ನಿರ್ಮಾಣ ಮಾಡಲು ಖರ್ಚು ಮಾಡಿದ ಹಣ ಎಷ್ಟು ; (ವಿವರ ನೀಡುವುದು)

(ಉ) ಮನೆ ಹಂಚಿಕೆ ಮಾಡಲು ಫಲಾನುಭವಿಗಳನ್ನು ಗುರುತಿಸಲಾಗಿದೆಯೇ ; ಈ ಮೊದಲು ಸಿದ್ಧಪಡಿಸಿದ ಫಲಾನುಭವಿಗಳ ಪಟ್ಟಿಯಲ್ಲಿ ಬದಲಾವಣೆ ಏನಾದರೂ ಮಾಡಲಾಗಿದೆಯೇ ; ಮತ್ತು ಹಕ್ಕುಪತ್ರ ವಿತರಣೆ ಮಾಡಲಾಗಿದೆಯೇ ; (ವಿವರ ನೀಡುವುದು)

(ಊ) ಈಗಾಗಲೇ ಕಟ್ಟಲಾಗಿರುವ ಮನೆಗಳಿಗೆ ಅವಶ್ಯವಿರುವ ರಸ್ತೆ, ನೀರು ಹಾಗೂ ವಿದ್ಯುತ್ ಪೂರೈಸಲಾಗಿದೆಯೇ ? (ವಿವರಿಸುವುದು)

## ರಸ್ತೆ ಮತ್ತು ಸಿಡಿ ಹಾನಿಯಾಗಿರುವ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೧ (೧೨೮೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜೂನ್–ಜುಲೈ–೨೦೨೧ರಲ್ಲಿ ಕೃಷ್ಣ ಮತ್ತು ತುಂಗಭದ್ರಾ ಪ್ರವಾಹದಿಂದ ಎಷ್ಟು ರಸ್ತೆ ಮತ್ತು ಸಿಡಿಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ರಸ್ತೆ ಮತ್ತು ಸಿಡಿ ಕಾಮಗಾರಿಗಳು ಪೂರ್ಣಗೊಂಡಿದೆಯೇ? (ವಿವರ ಒದಗಿಸುವುದು)

## ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಂಡ ಯೋಜನೆಗಳ ಕುರಿತು

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೨ (೧೨೧೨) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ (ಕರಾವಳಿ) ಜಿಲ್ಲೆಗಳಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಿದ ಯೋಜನೆಗಳಾವುವು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಸದರಿ ಜಿಲ್ಲೆಗಳಲ್ಲಿ ೨೦೧೭–೨೦೧೮, ೨೦೧೮–೨೦೧೯, ೨೦೧೯–೨೦೨೦, ೨೦೨೦–೨೦೨೧, ೨೦೨೧–೨೦೨೨ನೇ ಸಾಲಿನಲ್ಲಿ ಮತ್ಸ್ಯ ಯೋಜನೆ ಅಡಿಯಲ್ಲಿ ಮಂಜೂರಾಗಿರುವ ಮನೆಗಳೆಷ್ಟು ;

(ಇ) ಸದರಿ ಜಿಲ್ಲೆಗಳಲ್ಲಿ ಮೀನು ಉತ್ಪಾದನೆ ಹೆಚ್ಚಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಸದರಿ ಜಿಲ್ಲೆಗಳಲ್ಲಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮಂಜೂರು ಮಾಡಿರುವ ಫಲಾನುಭವಿಗಳ ಆಯ್ಕೆಗೆ ಅನುಸರಿಸಲಾಗಿರುವ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಮುಜರಾಯಿ ಇಲಾಖೆಯ ವ್ಯಾಪ್ತಿಯ ಆಸ್ತಿಯ ಕುರಿತು

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೩ (೧೨೦೮) ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಮುಜರಾಯಿ ಆಸ್ತಿಗಳಲ್ಲಿ ಎಷ್ಟು ಆಸ್ತಿಗಳನ್ನು ಹೋಟೆಲ್ ಉದ್ಯಮ ಹಾಗೂ ಇತರೆಗಳಿಗೆ ಗುತ್ತಿಗೆ ಮತ್ತು ಬಾಡಿಗೆಗೆ ನೀಡಲಾಗಿದೆ ; (ಆಸ್ತಿಯ ವಿವರ ಉದ್ಯಮದ ವಿವರದೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಆಸ್ತಿಗಳನ್ನು ಇಂದಿನ ಮಾರುಕಟ್ಟೆ ಬೆಲೆಗೆ ಸಮನಾಗಿ ಗುತ್ತಿಗೆ ಮತ್ತು ಬಾಡಿಗೆ ನೀಡಲಾಗಿದೆಯೇ ; ಕಡಿಮೆ ಬೆಲೆಗೆ ನೀಡಿದ್ದಲ್ಲಿ, ಈ ರೀತಿ ನೀಡಲು ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ನೀಡಿರುವ ಮುಜರಾಯಿ ಆಸ್ತಿಗಳನ್ನು ಸರ್ಕಾರವು ಯಾವಾಗ ತನ್ನ ಸುಪರ್ದಿಗೆ ತೆಗೆದುಕೊಳ್ಳಲಾಗುವುದು ; (ವಿವರವಾದ ಮಾಹಿತಿ ನೀಡುವುದು)

(ಈ) ದೇಶದ ಯಾವ ಯಾವ ರಾಜ್ಯಗಳಲ್ಲಿ ನಮ್ಮ ರಾಜ್ಯಕ್ಕೆ ಸೇರಿದ ಮುಜರಾಯಿ ಆಸ್ತಿಗಳಿವೆ ; ಅವು ಯಾವುವು ; ಅವುಗಳನ್ನು ಯಾವ ರೀತಿ ಅಭಿವೃದ್ಧಿ ಪಡಿಸಲಾಗಿದೆ ; ಅವು ನಮ್ಮ ರಾಜ್ಯದ ಜನರಿಗೆ ಯಾವ ರೀತಿ ಉಪಯೋಗಕ್ಕೆ ಲಭ್ಯವಾಗುತ್ತಿವೆ ; (ವಿವರವಾಗಿ ರಾಜ್ಯವಾರು ಮಾಹಿತಿ ಕೊಡುವುದು)

(ಉ) ಹೊರ ರಾಜ್ಯಗಳಲ್ಲಿರುವ ಮುಜರಾಯಿ ಆಸ್ತಿಗಳ ಅಭಿವೃದ್ಧಿ/ನವೀಕರಣ ಹಾಗೂ ಇತರೆ ಕಾಮಗಾರಿಗಳಿಗಾಗಿ ಕಳೆದ ೫ ವರ್ಷಗಳಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ ? (ವರ್ಷವಾರು ವಿವರವಾದ ಮಾಹಿತಿ ಕೊಡುವುದು)

## ಪಶು ಆಸ್ಪತ್ರೆಗಳ ನಿರ್ಮಾಣದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೪ (೧೧೫೮) ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಧಾರವಾಡ, ಗದಗ, ಹಾವೇರಿ ಜಿಲ್ಲೆಯಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ;

(ಆ) ೨೦೨೦–೨೧ನೇ ಸಾಲಿನಲ್ಲಿ ಧಾರವಾಡ, ಗದಗ, ಹಾವೇರಿ ಜಿಲ್ಲೆಯಲ್ಲಿ ಪಶು ಆಸ್ಪತ್ರೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಮೀಸಲಿಟ್ಟಿರುವ ಅನುದಾನದ ಮೊತ್ತವೆಷ್ಟು ;

(ಇ) ಧಾರವಾಡ, ಗದಗ, ಹಾವೇರಿ ಜಿಲ್ಲೆಯಲ್ಲಿ ಪಶು ಆಸ್ಪತ್ರೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಪಹಣಿಯಲ್ಲಿ ಸಮಸ್ಯೆಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫ (೧೧೩೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪಹಣಿಯಲ್ಲಿರುವ ಖಾಯಂ ಬೆಳೆ ಕಾಲಂ ರಲ್ಲಿ ತೆಂಗು, ಅಡಿಕೆ, ಖಾಯಂ ಬೆಳೆಗಳೆಂದು ನಮೂದು ಮಾಡಲು ಕ್ರಮ ಕೈಗೊಳ್ಳದಿರುವುದರಿಂದ, ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬೆಳೆಗಳನ್ನು ಖಾಯಂ ಬೆಳೆ ಕಾಲಂ ರಲ್ಲಿ ನಮೂದು ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ; (ಮಾಹಿತಿ ನೀಡುವುದು) ಪಹಣಿಯಲ್ಲಿ ನಮೂದು ಮಾಡಿದ್ದಲ್ಲಿ, ತಾಲ್ಲೂಕುವಾರು ಗ್ರಾಮವಾರು ಎಷ್ಟು ಪಹಣಿಗಳಲ್ಲಿ ಖಾಯಂ ಬೆಳೆ ನಮೂದಾಗಿರುವ ಹಾಗೂ ನಮೂದಾಗದೇ ಇರುವ ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು ;

(ಆ) ಪಹಣಿಯಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳನ್ನು ನಮೂದಿಸಲಾಗುತ್ತಿದೆಯೇ ; ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಬೆಳೆ ಕಟಾವಿನ ನಂತರ ಎ.ಪಿ.ಎಂ.ಸಿ. ಗಳಿಗೆ ರಾಗಿ ಮತ್ತು ಭತ್ತ ಮಾರಾಟ ಮಾಡುವಾಗ ಪಹಣಿಯಲ್ಲಿ ಬೆಳೆ ನಮೂದಾಗಿಲ್ಲವೆಂದು ವಿನಾಕಾರಣ ರೈತರನ್ನು ಅಲೆದಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಸಮಸ್ಯೆ ಬಗೆಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಸರ್ಕಾರವು ಮಂಜೂರು ಮಾಡಿದ ಭೂಮಿಯ ದುರಸ್ತು ಮಾಡುವ ಸಂಬಂಧ ಏಕ ವ್ಯಕ್ತಿ ಪ್ರಕರಣ ಇಲಾಖೆಯಲ್ಲಿ ಜಾರಿಯಲ್ಲಿದ್ದು, ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿ ಚಾಲ್ತಿಯಲ್ಲಿದೆಯೇ ; ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ; ಇದರಿಂದ ರೈತರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ?

## ಮೀನುಗಾರಿಕಾ ಬಂದರಿನ ಅಭಿವೃದ್ಧಿ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬ (೧೧೫೧) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಮೀನುಗಾರಿಕಾ ಬಂದರಿನ ಅಭಿವೃದ್ಧಿಗೆ ಕಳೆದ ೫ ವರ್ಷಗಳಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ ; ಎಷ್ಟು ಹೊಸ ಮೀನುಗಾರಿಕಾ ಬಂದರುಗಳು ಮೀನುಗಾರರ ಬಳಕೆಗೆ ಲಭ್ಯವಾಗಿದೆ ; ಮೀನುಗಾರರಿಗೆ ಬಂದರಿನಲ್ಲಿ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತದೆ ;

(ಆ) ಕಳೆದ ೩ ವರ್ಷಗಳಲ್ಲಿ ಎಷ್ಟು ಮೀನುಗಾರರಿಗೆ ಡೀಸೆಲ್ ಸಬ್ಸಿಡಿ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಮೀನುಗಾರರು ಕರ್ನಾಟಕ ಮತ್ಸ್ಯ ವಿಕಾಸ ಯೋಜನೆಯನ್ವಯ ಯಾವ ರೀತಿಯ ತಾಂತ್ರಿಕತೆಯನ್ನು ಅಳವಡಿಸಲು ಪ್ರೋತ್ಸಾಹಿಸಲಾಗಿದೆ ; ಇದರಿಂದ ಮೀನುಗಾರರು ಎಷ್ಟು ಲಾಭ ಗಳಿಸಿರುತ್ತಾರೆ ; ಈ ಯೋಜನೆಗೆ ಸರ್ಕಾರ ಯಾವ ಯಾವ ರೀತಿಯಲ್ಲಿ ವೆಚ್ಚ ಮಾಡಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ದೊಡ್ಡಬಳ್ಳಾಪುರ–ಯಲಹಂಕ ಮಾರ್ಗದ ರಸ್ತೆ ಡಾಂಬರೀಕರಣ

**ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) –**

೧೧೭ (೧೨೮೧) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದೊಡ್ಡಬಳ್ಳಾಪುರ–ಯಲಹಂಕ ಮಾರ್ಗ ಮಧ್ಯೆ ಬರುವ ಮಾರಸಂದ್ರದಿಂದ, ದೊಡ್ಡಬಳ್ಳಾಪುರ ತಾಲ್ಲೂಕು ಕಾಡನೂರ ಕೈಮರ ಗೇಟ್ ಮೂಲಕ ಚೆನ್ನದೇವಿ ಅಗ್ರಹಾರಕ್ಕೆ ಹೋಗುವ ರಸ್ತೆ ಡಾಂಬರೀಕರಣ ಕಾಮಗಾರಿ ಕೈಗೊಂಡಿದ್ದು ಯಾವಾಗ ; ಈ ಕಾಮಗಾರಿ ಪೂರ್ಣಗೊಂಡಿದೆಯೇ ; (ವಿವರ ನೀಡುವುದು)

(ಆ) ಈ ಕಾಮಗಾರಿಗೆ ಸೇರಿದಂತೆ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಬರುವ ದೊಡ್ಡ ತುಮಕೂರು ಗ್ರಾಮದಿಂದ ಗೌಡಹಳ್ಳಿ ಗ್ರಾಮದವರೆಗೆ ಕೆರೆ ಏರಿ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಸುಮಾರು ೨ ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇಲ್ಲಿನ ಕೆರೆಗೆ ತಡೆಗೋಡೆ ಇಲ್ಲದಿರುವುದರಿಂದ, ವಾಹನ ಸವಾರರಿಗೆ ಅಪಾಯವಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಈ) ಬಂದಿದ್ದಲ್ಲಿ, ತಡೆಗೋಡೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಉ) ಸ್ಥಗಿತಗೊಂಡಿರುವ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಪೂರ್ಣಗೊಳಿಸಲಾಗುವುದು ?

## ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಲಿಕ್ರಾಂತಿ ಯೋಜನೆಯಡಿ ಬಿಡುಗಡೆಯಾದ ಹಾಗೂ ವೆಚ್ಚವಾದ ಮೊತ್ತದ ಬಗ್ಗೆ

ಶ್ರೀ ಹೆಚ್.ಎಂ. ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –

೧೧೮ (೧೧೪೬) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಲ್ಲಿ ನೀಲಿಕ್ರಾಂತಿ ಯೋಜನೆಯಡಿ ಬಿಡುಗಡೆಯಾದ ಹಾಗೂ ವೆಚ್ಚವಾದ ಹಣವೆಷ್ಟು ; (ಫಲಾನುಭವಿಗಳ ಪಟ್ಟಿ ಸಹಿತ ವಿವರ ನೀಡುವುದು)

(ಆ) ನೀಲಿಕ್ರಾಂತಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಸರ್ಕಾರ ಯಾವ ಪ್ರಚಾರ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಇ) ಕರಾವಳಿ ಪ್ರದೇಶದ ಮೀನುಗಾರಿಕೆ ಸಬ್ಸಿಡಿ ಸಹಿತ ಮೋಟಾರ್ ಬೋಟ್ ಹಾಗೂ ಇನ್ನಿತರೆ ಪರಿಕರ ಒದಗಿಸುವಲ್ಲಿ ಇಲಾಖೆ ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಕಂದಾಯ ಇಲಾಖೆಯ ಖಾಲಿ ಹುದ್ದೆಗಳ ಬಗ್ಗೆ

ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –

೧೧೯ (೧೨೬೯) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳೆಷ್ಟು ; (ವಿವರ ನೀಡುವುದು)

(ಆ) ಇದರಲ್ಲಿ ಭರ್ತಿಯಾದ ಹುದ್ದೆಗಳೆಷ್ಟು ; ಖಾಲಿ ಇರುವ ಹುದ್ದೆಗಳೆಷ್ಟು ;

(ಇ) ಈ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ; (ವಿವರ ನೀಡುವುದು)

(ಈ) ಸರ್ವೇಯರ್ ಹುದ್ದೆಗಳು ಖಾಲಿ ಇರುವುದರಿಂದ ರೈತರ ಜಮೀನಿನ ಅಳತೆ ಕಾರ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ರಾಜ್ಯದ ಹಲವು ಪುರಾತನ ದೇವಾಲಯಗಳು ಶಿಥಿಲಾವಸ್ಥೆ ತಲುಪಿರುವ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

೧೨೦ (೧೨೧೭) ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಹಲವು ಕಡೆ ಪುರಾತನ ಕಾಲದ ದೇವಾಲಯಗಳು ಶಿಥಿಲಾವಸ್ಥೆಗೆ ತಲುಪಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ; (ಜಿಲ್ಲಾವಾರು ದೇವಾಲಯಗಳ ವಿವರಗಳನ್ನು ನೀಡುವುದು)

(ಆ) ಬೆಂಗಳೂರು ನಗರದ ಶಿವಾಜಿನಗರದ ಬ್ರಾಡ್–ವೇ ರಸ್ತೆಯಲ್ಲಿ ಪುರಾತನ ಕಾಲದ ನಂದಿ ದೇವಾಲಯ ಶಿಥಿಲಾವಸ್ಥೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ; (ವಿವರ ನೀಡುವುದು)

(ಇ) ಸದರಿ ದೇವಸ್ಥಾನದ ಅಭಿವೃದ್ಧಿಗೆ ಸರ್ಕಾರದ ಕ್ರಮವೇನು ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.360/ಪಿಸಿ

**List of Questions for Oral Answers**

**Total No. of Questions - 15**

# LIST - 08

# KARNATAKA LEGISLATIVE COUNCIL

## ONE HUNDRED AND FORTY-FOURTH SESSION

## Wednesday, the 22nd September, 2021

---

**GROUP - III**

1. Minister for Public Works
2. Minister for Revenue
3. Minister for Housing and Infrastructure Development
4. Minister for Fisheries, Ports and Inland Water Transport
5. Minister for Muzrai, Haj and Wakf
6. Minister for Animal Husbandry

---

### THE LAND GIVEN ON LEASE DURING THE BRITISH RULE

**Smt. Bharathi Shetty (Nominated) -**

106 (1283) Will the Minister for Revenue be pleased to state:-

a. whether the Government has confiscated the land which have completed the lease period given on lease basis in the British rule before Independence, if not, the reasons therefor;

b. the measures of the Government to recover the said lands immediately which are located in centre of the city, which will be a big asset to the Government;

c. if the lease is continuing, the contemplations of the Government in connection with determination of present market value in lane of BMRCL (Bengaluru Metro) model?

## NATIONAL HIGHWAYS IN THE STATE

**Sri R. Dharmasena (Local Authorities Constituency) -**

107 (1259) Will the Minister for Public Works be pleased to state:-

a. the number of National Highways in the State; the places thereof; (details be furnished)

b. the name of the department which is carryingout the construction and maintenance of these Highways;

c. the particulars of ongoing National Highways works at various places carrying by the National Highway Authority of India (NHAI); the date on which the Government has entrusted the construction work of road to the National Highway Authority; the present stage of the same?

## LAND VICTIMS OF THE YETTINAHOLE PROJECT

**Sri M.A. Gopalaswamy (Local Authorities Constituency) -**

108 (1171) Will the Minister for Revenue be pleased to state:-

a. the extent of acres of land acquired in various villages for Yettinahole Irrigation Project which has undertaken in the limits of Hassan district; (complete information of name of the victims who have lost the land, extent of land and alongwith village be furnished)

b. the measures taken by the Revenue department to provide compensation by the Government to farmers who have lost the land for this scheme; whether it has come to the notice of the Government about the inconvenience is being caused to the land victims due to delay tactics of the Revenue department;

c. if so, the grant released by the Government to the land victims of the scheme so far; and the number of victims to whom compensation has been given; the amount of compensation has been given; (the name of the victims, amount of compensation and details of the village be furnished)

d. the number of land victims to who have not got compensation under these projects so far; (details of name of the land victims, amount of compensation alongwith details of the village be furnished) the reasons for the delay to provide compensation to the victims; and the timelimit within which steps would be taken to give the compensation? (complete information be furnished)

## LOSS CAUSED DUE TO THE RAIN IN DHARWAD, GADAG AND HAVERI DISTRICT

**Sri Mane Shrinivas (Local Authorities Constituency) -**

109 (1248) Will the Minister for Revenue be pleased to state:-

a. the statistics of loss of crops, house, lives and animals occurred in Dharwad, Gadag and Haveri district due to heavy rain recently across the State; (talukwise information be furnished)

b. whether the compensation has been provided by the Government to the victims who have lost their crop, house, lives and animals occurred in Dharwad, Gadag and Haveri district due to heavy rain recently across the State; (talukwise information be funished)

c. if the delay has been caused to provide compensation, the reasons therefor; and the timelimit within which the compensation would be provided?

## HOUSING SCHEMES OF PANCHAYATS OF BAGALKOTE-BELAGAVI DISTRICT

**Sri Nirani Hanamant Rudrappa (Graduates' Constituency)**

110 (1279) Will the Minister for Housing and Infrastructure Development be pleased to state:-

a. the extent of land that have been purchased to distribute the house for the poor people under the Vajpayee Housing Scheme by the panchayat of Bagalakote and Belagavi districts; and the date on which that has been purchased;

b. the amount earmarked by the Government for the same;

c. the number of houses have been constructed at present under this scheme; and number of houses are planned to be constructed;

d. the amount spent for the land and construction of house to this scheme till date; (details be furnished)

e. whether the beneficiaries have been identified to allocate the house; whether there is any changes made in the list of beneficiaries which has been prepared already and whether the title deed has been distributed to them; (details be furnished)

f. whether the necessary road, water and electricity has been provided for the houses which have been constructed already? (details be furnished)

## DAMAGE OF ROAD AND CROSS DRAINAGE (CD)

**Sri Basavaraj Patil Itagi (Local Authorities Constituency) -**

111 (1280) Will the Minister for Public Works be pleased to state:-

a. whether it has come to the notice of the Government that the number of Roads and Cross Drainages that are damaged due to flood from Krishna and Tungabhadra river in June-July-2021 in Koppal and Raichur districts;

b. if so, the action taken by the Government in this regard;

c. whether the road and cross drainage works have been completed? (details be furnished)

## SCHEMES IMPLEMENTED BY THE DEPARTMENT OF FISHERIES IN COASTAL DISTRICTS

**Sri B.K. Hariprasad (Elected by Legislative Assembly)**

112 (1212) Will the Minister for Fisheries, Ports and Inland Water Transport be pleased to state:-

a. the particulars of schemes that have been implemented by the department of Fisheries in Dakshina Kannada,

Udupi and Uttara kannada (coastal) districts; (complete information be furnished)

b. the number of houses that have been sanctioned under the Matsya Yojana in the said districts during the years 2017-18, 2018-19, 2019-20, 2020-21, 2021-22;

c. the action taken by the Government to increase the fish production in the said districts; (complete information be furnished)

d. the criteria that has been followed for selection of beneficiaries who have been sanctioned under the Matsya Ashraya Scheme in the said district? (the complete information be furnished)

**PROPERTY OF MUZRAI DEPARTMENT**

**Sri Kantharaj (BML) (Local Authorities Constituency) -**

113 (1208) Will the Minister for Muzrai, Haj and Wakf be pleased to state:-

a. the number of properties which have given for hotel business and other purposes on contract and rent among the Muzrai properties in the State;

b. whether the said properties have been given on contract and rent equivalent to the present market price; if it given at less price the reasons therefor; (detailed information be furnished)

c. the date on which the Government would be taken to its possession of Muzrai properties which have been given on contract/rental basis; (detailed information be furnished)

d. the particulars of Muzrai properties of our State have been included in various States of the Country; the particulars thereof; the manner in which that have been developed; the manner in which that are available for the use of people of our State; (Statewise detailed information be furnished)

e. the amount spent for the development/renewal and other works of Muzrai properties in the entire State during the last 5 years? (yearwise detailed information be furnished)

## CONSTRUCTION OF VETERINARY HOSPITALS

**Sri Pradeep Shettar (Local Authorities Constituency) -**

114 (1158) Will the Minister for Animal Husbandry be pleased to state:-

a. the number of veterinary hospitals which have been working in rented buildings in Dharwad, Gadag and Haveri districts;

b. the grant earmarked by the Government for the construction of veterinary hospitals in Dharwad, Gadag and Haveri districts during the year 2020-21;

c. the actions taken by the Government to construct veterinary hospitals in Dharwad, Gadag and Haveri districts?

## PROBLEMS IN PAHANI

**Sri N. Appajigowda (Local Authorities Constituency) -**

115 (1136) Will the Minister for Revenue be pleased to state:-

a. whether it has come to the notice of the Government that farmers facing hardship due to the action has not taken to mention the coconut and arecanut as permanent crops in the regular crops column of pahani; if so, the date on which the action would be taken to mention these crops in the column of permanent crops; (information be furnished) if mentioned in the pahani, the number of pahani's in which regular crop mentioned and not mentioned talukwise villagewise separate details be furnished;

b. whether Kharif and Rabi crops are being mentioned in Pahani; whether it has come to the notice of the Government that when the farmers going to sell Ragi and Paddy after crop harvest to A.P.M.C without any reason make them to roaming for the reason that the crop is not mentioned in pahani in the limits of Mandya district; the actions taken by the Government to redress the problem; (talukwise details be furnished)

c. the single applicant case is being enforced in the department in connection with making Durustu of land after sanctioned by the Government, whether it is in force in Mandya district at present; if not, the reasons therefor; whether the Government is aware of the problems being occurred to the farmers in this regard; if so, the actions taken for the same?

**DEVELOPMENT OF FISHING PORTS**

**Sri N. Ravi Kumar (Elected by Legislative Assembly) -**

116 (1151) Will the Minister for Fisheries, Ports and Inland Water Transport be pleased to state:-

a. the expenditure that has been incurred for the development of Fishing Ports of the State for the last 5 years; the number of new fishing ports are available for use of fishermen; the particulars of facilities are being provided to fishermen in ports;

b. the number of fishermen to whom Diesel subsidy has been provided for the last 3 years; (districtwise details be furnished)

c. the manner in which the fishermen have been encouraged to adopt technology under Karnataka Matsya Vikasa Yojana; the profit of the fishermen from the said scheme; the manner in which the Government has invested to the scheme? (districtwise details be furnished)

## ASPHALTING OF DODDABALLAPUR – YELAHANKA ROAD

**Sri A. Devegowda (Graduates' Constituency) -**

117 (1281) Will the Minister for Public Works be pleased to state:-

a. the date on which the work of asphalting of road has been undertaken from Marasandra via Kadnur Kaimara gate of Doddaballapur taluk to Chennadevi Agrahara which comes between Doddaballapur and Yelahanka route; whether the work has been completed; (details be furnished)

b. whether it has come to the notice of the Government that the development of tank embankment and asphalting work has been stopped about 2 years from Doddatumakuru village to Gowdahalli village in the limits of Doddaballapur taluk including said work;

c. whether the Government is aware about the danger to motorists due to there is no embankment to the lake;

d. if so, the date on which the embankment work would be commenced;

e. the date on which the stopped work would be commenced and completed?

## GRANT RELEASED AND SPENT UNDER THE BLUE REVOLUTION IN THE STATE

**Sri H.M. Ramesha Gowda (Elected by Legislative Assembly) -**

118 (1146) Will the Minister for Fisheries, Ports and Inland Water Transport be pleased to state:-

a. the grant released and spent under the Blue Revolution Scheme during the last 3 years; (details alongwith beneficiaries list be furnished)

b. the measures taken by the Government for publicity in connection with the implementation of the Blue Revolution Scheme;

c. the action taken by the department for providing of motor boat and other materials along with subsidy to fisheries of the coastal area? (details be furnished)

**VACANT POSTS IN REVENUE DEPARTMENT**

**Sri K.T.Srikantegowda (Graduates' Constituency) -**

119 (1269) Will the Minister for Revenue be pleased to state:-

a. the total number of posts that have been sanctioned in Revenue department of the State; (details be furnished)

b. out of which, the number of posts that have been filledup; the number of posts lying vacant;

c. the date on which these vacancies would be filled up; (details be furnished)

d. whether it has come to the notice of the Government that the survey work of farmers' land is being delayed due to vacant of surveyor posts;

e. the steps taken by the Government to solve this problem? (details be furnished)

**ANCIENT TEMPLES OF THE STATE ARE IN DILAPIDATED CONDITION**

**Sri P.R. Ramesh (Nominated) -**

120 (1217) Will the Minister for Muzrai, Haj and Wakf be pleased to state:-

a. whether it has come to the notice of the Government that several ancient temples are in dilapidated condition in many places of the State; if so, the action of the Government; (districtwise details of the temples be furnished)

b. whether it has come to the notice of the Government that the ancient Nandi temple in Shivajinagar Broadway Road of Bengaluru city is in dilapidated condition; if so, the stand of the Government; (details be furnished)

c. the action of the Government for development of the said temple? (details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 360 - 750 Copies